# ಕರ್ನಾಟಕ ವಿದ್ಯುತ್ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ದಿಮೆ)

CIN: U85110KA1970SGC001919

KARNATAKA POWER CORPORATION LTD.

ಪ್ರಧಾನ ಕಛೇರಿ: ನಂ.82, ಶಕ್ತಿಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-560 001

ಸಹಾಯವಾಣಿ ಸೇವೆಯು ಕೆಲಸದ ದಿನಗಳಲ್ಲಿ ಬೆಳಿಗ್ಗೆ 10.00 ಗಂಟೆಯಿಂದ ಮಧ್ಯಾಹ್ನ 1.00 ಗಂಟೆ ಮತ್ತು ಮಧ್ಯಾಹ್ನ:2.00 ಗಂಟೆಯಿಂದ ಸಂಜೆ:5.00 ಗಂಟೆ ವರೆಗೆ ಲಭ್ಯವಿರುತ್ತದೆ.

ದೂರವಾಣಿ : 080-22201820 ವೆಬ್‌ಸೈಟ್: www.kpcl.karnataka.gov.in

ಸಂಖ್ಯೆ: ಎಪಿಸಿ(ಹೆಚ್‌ಎಲ್‌ಎಸ್)/ ದಿನಾಂಕ:30.08.2022

## ಅಧಿಸೂಚನೆ

### ಗುತ್ತಿಗೆ ಆಧಾರದ ಮೇಲೆ ನೇಮಕಾತಿ

1970ನೇ ಇಸ್ವಿಯಲ್ಲಿ ಸ್ಥಾಪಿತವಾದ ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು (ಕೆಪಿಸಿಎಲ್) ಕರ್ನಾಟಕ ಸರ್ಕಾರದ ಉದ್ದಿಮೆಯಾಗಿದ್ದು, ವಿದ್ಯುತ ಉತ್ಪಾದನೆಯಲ್ಲಿ ತೊಡಗಿದೆ. ಇದರ ಉನ್ನತ ಮಟ್ಟದ ಕಾರ್ಯನಿರ್ವಹಣೆಗಾಗಿ ಹಲವಾರು ಪ್ರತಿಷ್ಠಿತ ಪ್ರಶಸ್ತಿಗಳನ್ನು ಸಹ ಗಳಿಸಿದೆ. ನಿಗಮದ ಕಾನೂನು ವ್ಯವಹಾರಗಳಿಗೆ ಸಂಬಂಧಿಸಿದಂತೆ ವಿವಿಧ ನ್ಯಾಯಾಲಯಗಳಲ್ಲಿನ ಕಾನೂನು ವಿಷಯಗಳಲ್ಲಿ ತೆಗೆದುಕೊಳ್ಳಬೇಕಾದ ಕ್ರಮದ ಬಗ್ಗೆ ಸಲಹೆ ನೀಡಲು, ನ್ಯಾಯಾಲಯಗಳಲ್ಲಿ ನಿಗಮದ ಪರವಾಗಿ ವ್ಯವಹರಿಸುವ ನಿಗಮದ ವಕೀಲರೊಂದಿಗೆ ಸಂಪರ್ಕಿಸಲು ಮತ್ತು ಇತರೆ ಕಾನೂನು ವಿಷಯಗಳಿಗೆ ಸಂಬಂಧಿಸಿದ ಕಾರ್ಯಗಳನ್ನು ನಿರ್ವಹಿಸಲು ಗುತ್ತಿಗೆ ಆಧಾರದ ಮೇಲೆ **ಮುಖ್ಯಸ್ಥರು(ಕಾನೂನು ಸೇವೆಗಳು)** ಹುದ್ದೆಗೆ ಈ ಕೆಳಕಂಡ ಅರ್ಹತೆಯಂತೆ ನೇಮಿಸಲು ನಿಗಮವು ಉದ್ದೇಶಿಸಿದೆ.

| ಕ್ರಮ ಸಂಖ್ಯೆ | ಹುದ್ದೆ | ಹುದ್ದೆಗಳ ಸಂಖ್ಯೆ | ನಿಗದಿಪಡಿಸಿದ ಅರ್ಹತೆ |
|---|---|---|---|
| 1 | ಮುಖ್ಯಸ್ಥರು(ಕಾನೂನು ಸೇವೆಗಳು) | 01 | ನಿವೃತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು |

1) **ಅರ್ಜಿ ಸಲ್ಲಿಸುವ ವಿಧಾನ:**
ನಿಗಮದ ವೆಬ್‌ಸೈಟ್ www.kpcl.karnataka.gov.inನಲ್ಲಿ ಲಭ್ಯವಿರುವ ಅರ್ಜಿ ನಮೂನೆಯಲ್ಲಿ ಅರ್ಜಿಯನ್ನು ಭರ್ತಿ ಮಾಡಿ ಲಕೋಟೆಯ ಮೇಲ್ಭಾಗದಲ್ಲಿ **"Application for the post of Head (Legal Services)"** ಎಂದು ನಮೂದಿಸಿ ನೋಂದಾಯಿತ ಅಂಚೆ (Registered post) ಮುಖಾಂತರ ದಿನಾಂಕ: 29.09.2022 ರೊಳಗಾಗಿ ತಲುಪುವಂತೆ ಕಳುಹಿಸುವುದು.

2) **ವಯೋಮಿತಿ: 60 ರಿಂದ 65 ವರ್ಷಗಳು.**

3) **ವೇತನ ಹಾಗೂ ಇತರೆ ಸೌಲಭ್ಯಗಳು:**

i) ಸದರಿ ಹುದ್ದೆಗೆ ಮಾಹೆಯಾನ ಸಂಭಾವನೆ ರೂ.**60,500/- (ಪ್ರಸ್ತುತ ಪಡೆಯುತ್ತಿರುವ ಪಿಂಚಣಿ ಹಾಗೂ ನಿಗಮದಿಂದ ಪಾವತಿಸಲಾಗುವ ಸಂಭಾವನೆ ಸೇರಿ ಅವರ ನಿವೃತ್ತ ಸಮಯದಲ್ಲಿ ಪಡೆಯುತ್ತಿದ್ದ ವೇತನವನ್ನು ಮೀರುವಂತಿಲ್ಲ)** subject to deduction of Income Tax as per rules.

ii) ರೂ.1000/- ಆತಿಥ್ಯ ಭತ್ಯೆ, ವಾಹನ ಸೌಕರ್ಯ ಹಾಗೂ ಸ್ಥಿರ ದೂರವಾಣಿ, ಎರಡು ದೈನಂದಿನ ಪತ್ರಿಕೆಗಳು ಹಾಗೂ ಎರಡು ನಿಯತಕಾಲಿಕ ಪತ್ರಿಕೆಗಳನ್ನು ಒದಗಿಸಲಾಗುವುದು.

iii) ಕಾರ್ಯ ಸ್ಥಳವು ಬೆಂಗಳೂರು ಆಗಿರುತ್ತದೆ. ಕಛೇರಿ ಕೆಲಸದ ನಿಮಿತ್ತ ಅವಶ್ಯಕವಾಗಿ ಪ್ರಯಾಣ ಮಾಡಬೇಕಾಗಿ ಬಂದಲ್ಲಿ, ನಿಗಮದಲ್ಲಿ ಪ್ರಧಾನ ಪ್ರಬಂಧಕರವರಿಗೆ ಲಭ್ಯವಿರುವ ಪ್ರಯಾಣ/ದಿನ ಭತ್ಯೆಗೆ ಅರ್ಹರಿರುತ್ತಾರೆ.

iv) ತಿಂಗಳಿಗೆ ಒಂದು ಸಾಂದರ್ಭಿಕ ರಜೆ ಹಾಗೂ 2.5 ಗಳಿಕೆ ರಜೆ (Non-encashable) ಗಳನ್ನು ನೀಡಲಾಗುವುದು.

**ಸೂಚನೆ:** ಗುತ್ತಿಗೆ ನೇಮಕಾತಿಯು ವರದಿ ಮಾಡಿಕೊಂಡ ದಿನಾಂಕದಿಂದ ಒಂದು ವರ್ಷದ ಅವಧಿಯಾಗಿದ್ದು, ಪ್ರಸ್ತುತ ಆರು ತಿಂಗಳ ಅವಧಿಗೆ ಸೀಮಿತವಾಗಿರುತ್ತದೆ, ಆರು ತಿಂಗಳ ಗುತ್ತಿಗೆ ಅವಧಿ ಮುಗಿದ ನಂತರ ಸೇವೆಯು ತೃಪ್ತಿಕರವಾಗಿದ್ದಲ್ಲಿ ಮಾತ್ರ ಸೇವೆ ಮುಂದುವರೆಸಲಾಗುವುದು.

4) **ಆಯ್ಕೆ ವಿಧಾನ :**

ಸಂದರ್ಶನ ಮುಖಾಂತರ ಆಯ್ಕೆ ಮಾಡಲಾಗುವುದು.

5) **ಸಲ್ಲಿಸಬೇಕಾದ ದಾಖಲೆಗಳು :**

ಈ ಕೆಳಕಂಡ ದಾಖಲೆಗಳನ್ನು ದೃಢೀಕರಿಸಿ(Self Attested) ಹಾಜರುಪಡಿಸುವುದು.

i) ಜನ್ಮ ದಿನಾಂಕಕ್ಕೆ ಆಧಾರವಾಗಿ ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯ ಅಂಕಪಟ್ಟಿ.

ii) ಸೇವೆಯಿಂದ ಬಿಡುಗಡೆಹೊಂದಿರುವ ಬಗ್ಗೆ ದಾಖಲೆ.

iii) ನಿವೃತ ಸಮಯದಲ್ಲಿ ಪಡೆದ ವೇತನ ಪಟ್ಟಿ (Last pay drawn salary slip) ಹಾಗೂ ಪ್ರಸ್ತುತ ಪಡೆಯುತ್ತಿರುವ ಪಿಂಚಣಿ ಪಟ್ಟಿ (pension slip).

iv) ಒಂದು ಇತ್ತೀಚಿನ ಭಾವಚಿತ್ರ.

6) **ಸಂದರ್ಶನಕ್ಕೆ ಹಾಜರಾಗಬೇಕಾದ ಸಂದರ್ಭದಲ್ಲಿ ನಿಗಮದಿಂದ ಯಾವುದೇ ಪ್ರಯಾಣ/ದಿನಭತ್ಯೆ (TA/DA) ನೀಡಲಾಗುವುದಿಲ್ಲ.**

7) **ಸಾಮಾನ್ಯ ಸೂಚನೆಗಳು:**

ಅ) ನಿಗಮವು ಈ ಗುತ್ತಿಗೆ ನೇಮಕಾತಿಯನ್ನು ಭಾಗಶಃ/ಪೂರ್ಣವಾಗಿ ಯಾವುದೇ ಹಂತದಲ್ಲಿ ಯಾವುದೇ ಕಾರಣ ನೀಡದೆ ರದ್ದುಪಡಿಸುವ ಅಧಿಕಾರವನ್ನು ಹೊಂದಿದೆ.

ಆ) ಈ ಗುತ್ತಿಗೆ ಆಧಾರದ ನೇಮಕಾತಿಯು ನಿಗಮದ ಷರತ್ತು ಮತ್ತು ನಿಬಂಧನೆಗೆ ಒಳಪಟ್ಟಿರುತ್ತದೆ

ನಿರ್ದೇಶಕರು(ಮಾ.ಸಂ)